ಶ್ರಿ ಬಸವರಾಜ ಬೊಮ್ಮಾಯಿ: ಶ್ರೀ ರಾಮಸ್ವಾಮಿ ಗೌಡರು ಅವರ ತಾಲ್ಲೂಕಿನ ವಿಚಾರವನ್ನೇನು ಹೇಳಿದ್ದಾರೆ, 245 ಕಿ.ಮೀ. ವ್ಯಾಪ್ತಿಯಲ್ಲಿ ಬರುವಂಥ ಅವರ ತಾಲ್ಲೂಕಿನ ಬಗ್ಗೆ ಚರ್ಚೆ ಮಾಡಲಿಕ್ಕೆ ಇದೇ ವಾರದಲ್ಲಿ ಅಧಿಕಾರಿಗಳ ಸಭೆಯನ್ನು ಕರೆದಿದ್ದೇನೆ. ಆ ಭಾಗದ ಕೆರೆಗಳನ್ನು ತುಂಬಿಸುವುದಕ್ಕೆ ಮತ್ತು ಎಲ್ಲಿಯವರೆಗೆ ಮುಖ್ಯ ಕಾಲುವೆ ಮತ್ತು distrivutary ಮಾಡಬೇಕೆನ್ನುವುದಕ್ಕೆ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಯಾವುದೇ ಕಾರಣಕ್ಕೂ ಕೂಡ ಕುಣಿಗಲ್ ಕೆರೆಗೆ ಯಾವುದೇ ರೀತಿಯ ತೊಂದರೆಯಾಗದಂತೆ ಯೋಜನೆಗಳನ್ನು ರೂಪಿಸುತ್ತೇವೆ.

ಕೃಷ್ಣ ಮೇಲ್ದಂಡೆ ಯೋಜನೆಯ ಕಾಮಗಾರಿಗಳು

14 (195) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ):– ಜಲ ಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಇಂಡಿ ಕ್ಷೇತ್ರದ ಶಿರಶ್ಯಾಡ ಗ್ರಾಮದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಲುವೆಗಳಿಂದ ತಪ್ಪಿ ಹರಿದು (Escape Water) ಬರುವ ನೀರಿನಿಂದ ಗ್ರಾಮ ಜಲಾವೃತವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದಕ್ಕಾಗಿ ಅಲ್ಲಿ (Culvert) ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಆ ಕಾಮಗಾರಿ ಈಗ ಯಾವ ಹಂತದಲ್ಲಿದೆ ಮತ್ತು ಅಲ್ಲಿ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು):–

ಅ) ಇಂಡಿ ಕ್ಷೇತ್ರದ ಶಿರಶ್ಯಾಡ ಗ್ರಾಮದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಲುವೆಗಳಿಂದ ಹರಿದು (Escape Water) ಬರುವ ನೀರಿನಿಂದ ರಸ್ತೆಯ ಮೇಲೆ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಸದರಿ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇದಕ್ಕಾಗಿ ಶಿರಶ್ಯಾಡ – ಮಸಳಿ ರಸ್ತೆ ಸೇತುವೆ ನಿರ್ಮಾಣದ ಕಾಮಗಾರಿಗೆ ನಿಗಮದಡಿ ಈಗಾಗಲೇ ರೂ. 346.00 ಲಕ್ಷಗಳ ಅಂದಾಜು ಪತ್ರಿಕೆಯನ್ನು ತಯಾರಿಸಿದ್ದು, ಕೂಡಲೇ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಶೀಘ್ರದಲ್ಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತದೆ.

ಡಾ॥ ಬಗಲಿ ಸಾರ್ವಭೌಮ ಸಾತಗೌಡ: ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ಆದರೆ ಈ ಕಾಮಗಾರಿಗೆ 2010 ರಲ್ಲಿಯೇ ಟೆಂಡರ್ ಕರೆಯಲಾಗಿತ್ತು. ನಂತರ ಆ ಟೆಂಡರನ್ನು ಹಿಂದಕ್ಕೆ ಪಡೆಯಲಾಯಿತು. ಆಮೇಲೆ ಅದನ್ನು ಟಿಎಸಿಗೆ ಕಳುಹಿಸಲಾಯಿತು. ಟಿಎಸಿಯವರು ಒಂದು ಅನಾವಶ್ಯಕ objection create

ಮಾಡುತ್ತಾ ಕಳೆದ ಒಂದು ವರ್ಷದಿಂದ ಆ ಕಾಮಗಾರಿಗಳಿಗೆ ಅಪ್ರೂವಲ್ ಕೊಡದೆ ತೊಂದರೆ ಕೊಡುತ್ತಿದ್ದಾರೆ. ನಾನು ಮಾನ್ಯ ಮಂತ್ರಿಗಳಿಂದ ಎರಡು ವಿಷಯಗಳ ಬಗ್ಗೆ ತಿಳಿಯಬಯಸುತ್ತೇನೆ. ಈ ಟಿಎಸಿ ಯಿಂದ ಈ ಕಾಮಗಾರಿ ಯಾವಾಗ ಕ್ಲಿಯರ್ ಆಗುವುದು ಹಾಗೂ ಸಂಭಾವ್ಯವಾಗಿ ಎಷ್ಟು ತಿಂಗಳ ನಂತರ ಮಾನ್ಯ ಸಚಿವರು ಈ ಕಾಮಗಾರಿ ಬಗ್ಗೆ ಟೆಂಡರ್ ಕರೆಯಬಹುದು ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಮೊದಲು ಮಾಡಿರುವಂಥ ಕಾಮಗಾರಿಯ ವಿನ್ಯಾಸಕ್ಕೂ ಈಗ ಮಾಡುವುದಕ್ಕೆ ಬಹಳ ವ್ಯತ್ಯಾಸವಿದೆ. ನೀರು ಬಹಳ ದೊಡ್ಡ ಪ್ರಮಾಣದಲ್ಲಿ ಹೋಗುತ್ತಿರುವುದರಿಂದ ಅದನ್ನು permanent basis ನಲ್ಲಿ culvert ಮಾಡಿ, ಮಾಡಬೇಕೆನ್ನುವ ದೃಷ್ಟಿಯಿಂದ ಮೂರು ಕೋಟಿ ನಲವತ್ತಾರು ಲಕ್ಷ ರೂಪಾಯಿಗಳ ಪುನರ್ ಅಂದಾಜು ಮಾಡಿದ್ದೇವೆ. ಈಗಾಗಲೇ ಅದು ಟಿಎಸಿ ಮುಂದೆ ಇದೆ. ಕೂಡಲೆ ಇನ್ನೊಂದು ತಿಂಗಳೊಳಗೆ ಅದಕ್ಕೆ ಅನುಮೋದನೆಯನ್ನು ಕೊಟ್ಟು ಕಾಮಗಾರಿಯನ್ನು ಪ್ರಾರಂಭಿಸುತ್ತೇವೆ.

ಬಾಚಣಕಿ ಜಲಾಶಯ

12 (250) ಶ್ರೀ ಪಾಟೀಲ್ ವಿ. ಎಸ್. (ಯಲ್ಲಾಪುರ):– ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮುಂಡಗೋಡ ತಾಲ್ಲೂಕು ಬಾಚಣಕಿ ಜಲಾಶಯದ ವಿಸ್ತೀರ್ಣವೆಷ್ಟು; ಇದರಿಂದ ಪ್ರಯೋಜನ ಪಡೆಯುವ ನೀರಾವರಿ ಕ್ಷೇತ್ರ ಎಷ್ಟು;

ಆ) ಮುಂಡಗೋಡ ತಾಲ್ಲೂಕು ಬಾಚಣಕಿ ಜಲಾಶಯದ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಒತ್ತುವರಿ ಬಿಡುಗಡೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು;

ಇ) ಬಾಚಣಕಿ ಜಲಾಶಯದ ಹೂಳು ತೆಗೆಯುವ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–

ಅ) ಜಲಾಶಯದ ವಿಸ್ತೀರ್ಣ 203 ಹೆಕ್ಟೇರ್, ಇದರಿಂದ ಪ್ರಯೋಜನ ಪಡೆಯಬಹುದಾದ ನೀರಾವರಿ ಕ್ಷೇತ್ರ 1944 ಹೆಕ್ಟೇರ್

ಆ) ಈ ಕೆರೆಯು ಒತ್ತುವರಿಯಾಗಿರುವುದು ಮೇಲ್ನೋಟಕ್ಕೆ ಕಂಡು ಬರುವುದಿಲ್ಲ.